# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಸದಸ್ಯರ ಹೆಸರು | ಶ್ರೀ ಬಿ. ಎಂ. ಫಾರೂಕ್ (ವಿಧಾನಸಭೆಯಿಂದ ಚುನಾಯಿತರಾದವರು) |
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 79 |
| ಉತ್ತರಿಸಬೇಕಾದ ದಿನಾಂಕ | 04-07-2023 |
| ಉತ್ತರಿಸಬೇಕಾದವರು | ನಗರಾಭಿವೃದ್ಧಿ ಹಾಗೂ ನಗರ ಯೋಜನೆ ಸಚಿವರು. |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ | ದಕ್ಷಿಣ ಕನ್ನಡ ಜಿಲ್ಲೆಯ ಉಳ್ಳಾಲ ನಗರಸಭೆ ವ್ಯಾಪ್ತಿಯಲ್ಲಿ ಅಸಮರ್ಪಕವಾಗಿ ಅಳವಡಿಸಲ್ಪಟ್ಟ ಅಂಡರ್ ಗ್ರೌಂಡ್ ಡ್ರೈನೇಜ್ (ಯುಜಿಡಿ) ವ್ಯರ್ಥವಾಗಿ ಯೋಜನಾ ವೈಫಲ್ಯ ಆರ್ಥಿಕ ನಷ್ಟವುಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಸರ್ಕಾರದ ಆದೇಶ ಸಂಖ್ಯೆ: ಯುಡಿಡಿ 14 ಯುಡಿಎಸ್ 2009, ದಿನಾಂಕ: 23.06.2009 ರಲ್ಲಿ ಉಳ್ಳಾಲ ನಗರಸಭೆಗೆ ಯು.ಜಿ.ಡಿ ವ್ಯವಸ್ಥೆ ಕಲ್ಪಿಸುವ ರೂ.65.71 ಕೋಟಿಗಳ ಯೋಜನೆಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿರುತ್ತದೆ.<br><br>ಸದರಿ ಕಾಮಗಾರಿಯನ್ನು 2 ಪ್ಯಾಕೇಜ್‌ಗಳಲ್ಲಿ ಕೈಗೊಳ್ಳಲಾಗಿದ್ದು, ವಿವರಗಳು ಈ ಕೆಳಗಿನಂತಿದೆ.<br><br>**ಪ್ಯಾಕೇಜ್-1** ರಲ್ಲಿ 60.50 ಕಿ.ಮೀ. ಒಳಚರಂಡಿ ಕೊಳವೆ ಮಾರ್ಗ ಅಳವಡಿಸಿ 2228 ಆರ್.ಸಿ.ಸಿ. ಮೆಷಿನ್‌ಹೋಲ್‌ಗಳನ್ನು ನಿರ್ಮಿಸಿ 2015 ರಲ್ಲಿ ಪೂರ್ಣಗೊಳಿಸಲಾಗಿದೆ.<br><br>**ಪ್ಯಾಕೇಜ್-2** ರಲ್ಲಿ ರೂ.28.87 ಕೋಟಿಗಳ ಮೊತ್ತದಲ್ಲಿ 8 ವೆಟ್‌ವೆಲ್‌ಗಳು ಹಾಗೂ 2 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣವನ್ನು ದಿನಾಂಕ: 27.02.2019 ರಂದು ಕೈಗೆತ್ತಿಕೊಳ್ಳಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತವೆ.<br><br>ಮುಂದುವರಿದಂತೆ, ಉಳ್ಳಾಲ ನಗರದ ಭೂಮಿಯ ಮೇಲ್ಮೈಗನುಗುಣವಾಗಿ ಪ್ಯಾಕೇಜ್-2ರ ಕಾಮಗಾರಿಯನ್ನು 2 ವಲಯಗಳಾಗಿ ವಿಂಗಡಿಸಿದ್ದು, ಕಾಮಗಾರಿಯ ಪ್ರಗತಿಯು ಈ ಕೆಳಗಿನಂತಿದೆ:<br><br>**ವಲಯ-1:- 4 ವೆಟ್‌ವೆಲ್ ಮತ್ತು 1 ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ.**<br><br>• ಕೋಡಿ ಕೋಟೆಪುರದಲ್ಲಿ 1 ವೆಟ್‌ವೆಲ್ ಹಾಗೂ 6.60 MLD ಸಾಮಾರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ ಕಾಮಗಾರಿ ಪೂರ್ಣಗೊಂಡಿದ್ದು, ಸದರಿ ಯೋಜನೆಯನ್ನು ಚಾಲನೆಗೊಳಿಸಲು ಗೃಹ ಸಂಪರ್ಕ ವ್ಯವಸ್ಥೆಯನ್ನು ನಗರಸಭೆ ವತಿಯಿಂದ ಕೈಗೊಳ್ಳಬೇಕಾಗಿರುವುದರಿಂದ ಈ ಕುರಿತು ಶೀಘ್ರ ಕ್ರಮಕೈಗೊಳ್ಳಲು ಉಳ್ಳಾಲ ನಗರಸಭೆಯನ್ನು ಕೋರಲಾಗಿರುತ್ತದೆ.<br><br>• ಬಂಡಿಕೊಟ್ಯ ಮತ್ತು ತೊಕ್ಕೊಟ್ಟು ಜಂಕ್ಷನ್ ಬಳಿ ನಿರ್ಮಿಸಲಾಗುತ್ತಿರುವ ವೆಟ್‌ವೆಲ್ ಕಾಮಗಾರಿ ಪ್ರಗತಿಯಲ್ಲಿದ್ದು, ಭೂಮಟ್ಟದವರೆಗೆ ಪೂರ್ಣಗೊಂಡಿರುತ್ತದೆ.<br><br>• ಕೈಕೋ ಸುಭಾಸ್ ನಗರದಲ್ಲಿ ವೆಟ್‌ವೆಲ್ ನಿರ್ಮಿಸಲು ಸಾರ್ವಜನಿಕರ ವಿರೋಧವಿದ್ದು ಕಾಮಗಾರಿಯು ಸ್ಥಗಿತವಾಗಿರುತ್ತದೆ. |

| | | |
|---|---|---|
| | | <u>ವಲಯ-2:- 4 ವೆಟ್‌ವೆಲ್ ಮತ್ತು 1 ತ್ಯಾಜ್ಯ ನೀರು ಸಂಸ್ಕರಣಾ ಘಟಕ ನಿರ್ಮಾಣ.</u><br>• ಹೊಸಗದ್ದೆ, ಕಲ್ಲಾಪು ಬುರ್ದುಗಳಲ್ಲಿ 2 ವೆಟ್‌ವೆಲ್ ಹಾಗೂ 1 2.50 MLD ಸಾಮಾರ್ಥ್ಯದ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಗುರುತಿಸಿದ ಜಾಗಕ್ಕೆ ಮಾನ್ಯ ಉಚ್ಚ ನ್ಯಾಯಾಲಯದ ತಡೆಯಾಜ್ಞೆ ಇರುತ್ತದೆ.<br>• ಕಲ್ಲಾಪು ಮೊನೆಪು ಮತ್ತು ಕಲ್ಲಾಪು ಪಟ್ಲ ಬಳಿ 2 ವೆಟ್‌ವೆಲ್‌ಗಳನ್ನು ನಿರ್ಮಿಸಲು ಸಾರ್ವಜನಿಕರ ವಿರೋಧವಿರುವುದರಿಂದ ನಗರಸಭೆಯಿಂದ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಜಾಗಗಳನ್ನು ಇನ್ನೂ ಸಹ ಹಸ್ತಾಂತರಿಸಿರುವುದಿಲ್ಲ.<br><br>ಈ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ಒಟ್ಟು 8 ವೆಟ್‌ವೆಲ್‌ಗಳ ಪೈಕಿ ವಲಯ-1ರಲ್ಲಿ ಒಂದು ವೆಟ್‌ವೆಲ್ ಕಾಮಗಾರಿ ಪೂರ್ಣಗೊಂಡಿದ್ದು, ಎರಡು ವೆಟ್‌ವೆಲ್‌ಗಳ ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆ. ನಗರ ಸಭೆ ವತಿಯಿಂದ ಒಳಚರಂಡಿ ಗೃಹ ಸಂಪರ್ಕಗಳನ್ನು ಕಲ್ಪಿಸಿದಲ್ಲಿ ಉಳ್ಳಾಲ ನಗರದಲ್ಲಿ ಭಾಗಶ: ಒಳಚರಂಡಿ ವ್ಯವಸ್ಥೆಯನ್ನು ಕಲ್ಪಿಸಿದಂತಾಗುತ್ತದೆ ಹಾಗೂ ಉಳಿದ 5 ವೆಟ್‌ವೆಲ್‌ಗಳು ಮತ್ತು 1 ಎಸ್.ಟಿ.ಪಿ ಘಟಕದ ಜಾಗಗಳನ್ನು ಮಂಡಳಿಗೆ ಹಸ್ತಾಂತರಿಸಿದ ನಂತರ ಕಾಮಗಾರಿಗಳನ್ನು ಕೈಗೊಂಡು ಸಂಪೂರ್ಣವಾಗಿ ಯು.ಜಿ.ಡಿ ವ್ಯವಸ್ಥೆ ಅಳವಡಿಸಲು ಕ್ರಮವಹಿಸಲಾಗುವುದು. |
| ಆ | ತಾಂತ್ರಿಕ ಲೆಕ್ಕಾಚಾರಗಳ ವ್ಯತ್ಯಾಸದಿಂದ ಸರಿಯಾದ ಇಳಿಜಾರು ಇಲ್ಲದೇ ಕೆಲವಡೆ ಮನೆಗಳ ತಳಪಾಯದ ಮೇಲ್ಮಟ್ಟದಲ್ಲಿ ಹಾದುಹೋಗಿ ಕೊಳಚೆಯು ಜನವಸತಿಗಳಲ್ಲಿ ತುಂಬುವುದರಿಂದ ಉಂಟಾಗುವ ಆರೋಗ್ಯ ನೈರ್ಮಲ್ಯದ ಸಮಸ್ಯೆಗಳನ್ನು ಸರಿಪಡಿಸಲು ಯಾವ ಕಾಲಮಿತಿಯಲ್ಲಿ ಕ್ರಮಕೈಗೊಳ್ಳಲಿದೆ; | ಸದರಿ ಯೋಜನೆಯ ವಿನ್ಯಾಸದಲ್ಲಿ ಸೀವರ್ ಲೈನ್ ಮತ್ತು ಮ್ಯಾನ್ ಹೋಲ್ ಗಳನ್ನು ಭೌಗೋಳಿಕ ಅಂಶ ಮತ್ತು ಇಳಿಜಾರನ್ನು ಪರಿಗಣಿಸಿ ಗುರುತ್ವಾಕರ್ಷಣೆ ಮುಖಾಂತರ ವೆಟ್‌ವೆಲ್‌ಗೆ ಮಲೀನ ನೀರು ಹರಿಯಲು ಅನುವು ಮಾಡಲಾಗಿದೆ.<br>ಮುಂದುವರಿದು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ವತಿಯಿಂದ ಸಿದ್ದಪಡಿಸಿದ್ದ ಮೂಲ ಅಂದಾಜು ಪಟ್ಟಿಯಲ್ಲಿ ಗೃಹ ಸಂಪರ್ಕ ವ್ಯವಸ್ಥೆ ಕಲ್ಪಿಸಲು ಅನುವುಮಾಡಿಲ್ಲದಿರುವುರಿಂದ ಗೃಹಸಂಪರ್ಕ ವ್ಯವಸ್ಥೆ ಕಲ್ಪಿಸಲು ನಗರಸಭೆ ವತಿಯಿಂದ ಕ್ರಮಕೈಗೊಳ್ಳಬೇಕಾಗಿರುತ್ತದೆ.<br><br>ಈ ಯೋಜನೆಯಡಿ ನಿರ್ಮಿಸಲು ಉದ್ದೇಶಿಸಿರುವ ವಿವಿಧ ಮಲೀನ ನೀರು ಶುದ್ದೀಕರಣ ಘಟಕಗಳ ನಿರ್ಮಾಣಕ್ಕೆ ಅವಶ್ಯವಿರುವ ಜಮೀನುಗಳನ್ನು ಸ್ಥಳೀಯ ಸಂಸ್ಥೆಯು ಮಂಡಳಿಗೆ ಹಸ್ತಾಂತರಿಸಿದ ನಂತರ ಮತ್ತು ಹೊಸಗದ್ದೆ, ಕಲ್ಲಾಪು ಬುರ್ದು ಇಲ್ಲಿ 2.50 MLD ಸಾಮಾರ್ಥ್ಯದ 2 ವೆಟ್‌ವೆಲ್ ಹಾಗೂ 1 ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ ನಿರ್ಮಾಣಕ್ಕೆ ಗುರುತಿಸಿದ ಜಾಗಕ್ಕೆ ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ಪ್ರಕರಣವು ಪೂರ್ಣಗೊಂಡ ನಂತರ ಸದರಿ ಯೋಜನೆಯಲ್ಲಿ ಬಾಕಿ ಉಳಿದಿರುವ ಎಲ್ಲಾ ಕಾಮಗಾರಿಯನ್ನು 6 ತಿಂಗಳೊಳಗಾಗಿ ಪೂರ್ಣಗೊಳಿಸಲು ಕ್ರಮವಹಿಸಲಾಗುವುದು. |
| ಇ | ಪರಿಣಿತ ತಂತ್ರಜ್ಞರ ಸಲಹೆ, ಶಿಫಾರಸ್ಸುಗಳನ್ನು ಪಡೆದು WETWELL ಗಳು ಮುಂತಾಗಿ ಸಮರ್ಪಕ ವ್ಯವಸ್ಥೆ ಅಳವಡಿಸದಿರಲು ಕಾರಣಗಳೇನು; (ವಿವರ ನೀಡುವುದು) | ಉಳ್ಳಾಲ ನಗರಸಭೆಗೆ ಯು.ಜಿ.ಡಿ ವ್ಯವಸ್ಥೆ ಕಲ್ಪಿಸುವ ಕಾಮಗಾರಿಗೆ ಮೂರನೇ ವ್ಯಕ್ತಿಯಿಂದ (third party inspection) ಸರ್ವೆ ಕಾರ್ಯವನ್ನು ಕೈಗೊಂಡು CPHEEO Norm (ಒಳಚರಂಡಿ ವ್ಯವಸ್ಥೆಗಳ ಕೈಪಿಡಿ) ಪ್ರಕಾರ ವಿನ್ಯಾಸಗೊಳಿಸಿ ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಅನುಮೋದನೆ ಪಡೆಯಲಾಗಿದ್ದು, ಸದರಿ ತಾಂತ್ರಿಕ ಸಮಿತಿಯಲ್ಲಿ ಇತರ ಇಲಾಖೆಯ ಪರಿಣಿತರಿರುತ್ತಾರೆ. |

| | | |
|---|---|---|
| ಈ | ಅತ್ಯುತ್ತಮ ಬೀಚ್ ಗಳಲ್ಲಿ ಒಂದಾದ ಉಳ್ಳಾಲಕ್ಕೆ ಯುಜಿಡಿ ಅವ್ಯವಸ್ಥೆಯ ದುರ್ವಾಸನೆಯಿಂದ ನರಳುತ್ತಿರುವ ಜನತೆಗೆ ಪ್ರವಾಸಿಗರಿಗೆ ಇದರಿಂದ ಮುಕ್ತಿ ದೊರೆಯುವುದು ಯಾವಾಗ; ಈ ನಿಟ್ಟಿನಲ್ಲಿ ಶೀಘ್ರ ಕ್ರಮ ಕೈಗೊಳ್ಳಲಾಗುವುದೇ? (ವಿವರವಾಗಿ ವರದಿ ನೀಡುವುದು) | ಉಳ್ಳಾಲ ನಗರಸಭಾ ವ್ಯಾಪ್ತಿಯಲ್ಲಿ ಪೂರ್ಣ ಪ್ರಮಾಣದ ಒಳಚರಂಡಿ ಕಾಮಗಾರಿಯನ್ನು ಕೈಗೊಳ್ಳಲು ಮಾನ್ಯ ಉಚ್ಚ ನ್ಯಾಯಾಲಯದಲ್ಲಿ ಬಾಕಿ ಇರುವ ಪ್ರಕರಣವನ್ನು ಇತ್ಯರ್ಥಪಡಿಸಿ ಕಾಮಗಾರಿಗೆ ಅಗತ್ಯವಿರುವ ಜಮೀನನ್ನು ನಗರಸಭೆಯು ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಗೆ ಹಸ್ತಾಂತರಿಸಿದ ನಂತರ ವೆಟ್‌ವೆಲ್‌ಗಳು ಹಾಗೂ ತ್ಯಾಜ್ಯ ನೀರು ಶುದ್ಧೀಕರಣ ಘಟಕಗಳನ್ನು ನಿರ್ಮಿಸಿ ತ್ಯಾಜ್ಯ ನೀರನ್ನು ಶುದ್ಧಿಕರಿಸಲಾಗುವುದು. ಇದರಿಂದಾಗಿ ತ್ಯಾಜ್ಯ ನೀರಿನಿಂದ ಉಂಟಾಗುವ ದುರ್ವಾಸನೆ ಸಂಧರ್ಭವು ಉದ್ಭವಿಸುವುದಿಲ್ಲ. |

ಸಂಖ್ಯೆ: ನಅಇ 36 ಯುಎಂಎಸ್ 2023

03/04/2023

(ಬಿ.ಎಸ್.ಸುರೇಶ್)

ನಗರಾಭಿವೃದ್ಧಿ ಮತ್ತು ನಗರ ಯೋಜನಾ ಸಚಿವರು